

بسم اللهِ الرّحمٰن الرّحيم

# ಖುರ್‌ಆನ್‌ನೊಂದಿಗಿರುವ ಪ್ರೇಮ ಮತ್ತು ಅದನ್ನು ಪಠಿಸುವುದರ ಮಹತ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**31-07-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕೆಲವು ದಿನಗಳ ಹಿಂದೆ ನಾನೊಂದು ಚಿಕ್ಕ ವಿಡಿಯೋ ನೋಡಿದೆ. ಒಬ್ಬ ಆಫ್ರಿಕನ್ ಮೌಲವಿ ಹೆಚ್ಚು ಪ್ರಾಯದ ಜನರಿಗೆ ಪವಿತ್ರ ಖುರ್‌ಆನ್ ಕಲಿಸುತ್ತಿದ್ದಾಗ ಯಾರಾದರೂ ಸ್ವಲ್ಪ ತಪ್ಪು ಮಾಡಿದರೂ ಬೆತ್ತದಿಂದ ಆ ತಪ್ಪು ಮಾಡಿದ ವ್ಯಕ್ತಿಯನ್ನು ಬಹಳ ಹೊಡೆದು ಆತನ ಸ್ಥಿತಿಯನ್ನು ಕೆಡಿಸುತ್ತಿರುವುದಾಗಿ ಕಂಡೆನು. ಇದರ ಪರಿಣಾಮ ಏನಾಗುತ್ತದೆ ಎಂದರೆ ಜನರು ಪವಿತ್ರ ಖುರ್‌ಆನ್ ಓದುವುದನ್ನೇ ಬಿಟ್ಟು ಬಿಡುತ್ತಾರೆ. ಇದೇ ಕಾರಣದಿಂದ ಅರಬಿಯೇತರ ಮುಸ್ಲಿಮರಿಗೆ ಪವಿತ್ರ ಖುರ್‌ಆನ್ ಸರಿಯಾದ ರೀತಿಯಲ್ಲಿ ಓದಲಾಗುವುದಿಲ್ಲ. ಆದುದರಿಂದ ಪವಿತ್ರ ಖುರ್‌ಆನ್ ಕಲಿಸುವಾಗ ಅದನ್ನು ಓದಲು ಉತ್ಸಾಹ ಮತ್ತು ಪ್ರೀತಿ ಉಂಟಾಗುವ ರೀತಿಯಲ್ಲಿ ಕಲಿಸಬೇಕು. ಕೆಲವು ದಿನಗಳ ಹಿಂದೆ ಒಬ್ಬ ಜಪಾನಿ ಮಹಿಳೆ ನನ್ನನ್ನು ಕಾಣಲು ಬಂದರು. ಅವರು ಈಗ ಈ ದೇಶದಲ್ಲಿಯೇ ವಾಸಿಸುತ್ತಿದ್ದಾರೆ. ಅವರು ಸ್ವಲ್ಪ ಸಮಯದ ಹಿಂದೆ ಬೈಅತ್ ಮಾಡಿದ್ದರು. ಅವರು ಹೇಳಿದರು: ನಾನು ಮೂರು ವರ್ಷಗಳಲ್ಲಿ ಪವಿತ್ರ ಖುರ್‌ಆನ್ ಓದಿ ಪೂರ್ಣಗೊಳಿಸಿದೆ. ಅವರು ಕೆಲವು ವಚನಗಳನ್ನು ಪಠಿಸಲು ಬಯಸಿದರು. ಓದಿ ಹೇಳಲು ನಾನು ಅವರೊಂದಿಗೆ ಹೇಳಿದೆ. ಅವರು **ಆಯತುಲ್ ಕುರ್ಸೀ** ಎಷ್ಟು ತನ್ಮಯತೆಯಿಂದ ಪಠಿಸಿದರೆಂದರೆ ನಾನು ಆಶ್ಚರ್ಯಗೊಂಡೆ. ವಾಸ್ತವದಲ್ಲಿ ಪವಿತ್ರ ಖುರ್‌ಆನನ್ನು ಎಷ್ಟು ಪ್ರೀತಿಸಬೇಕೆಂದರೆ ಅದರಲ್ಲಿ ಮುಳುಗಿ ಅದನ್ನು ಪಠಿಸಬೇಕು. ಕೇವಲ ಖಾರಿಗಳ ಹಾಗೆ ತೋರಿಕೆಗೆ ಉಚ್ಚ ಸ್ವರದಿಂದ ಪಠಿಸುವುದು ಮುಖ್ಯ ಉದ್ದೇಶವಾಗಬಾರದು. ಅಲ್ಲಾಹನು ತರ್‌ತೀಲ್ (ಉಚ್ಚಾರಣೆಯ ಶುದ್ಧಿ)ಯ ಬಗ್ಗೆ ಆಜ್ಞಾಪಿಸಿದ್ದಾನೆ. ಸಾವಧಾನವಾಗಿ ಅತ್ಯುತ್ತಮ ರೀತಿಯಲ್ಲಿ ಉಚ್ಚರಿಸಿ ಪವಿತ್ರ ಖುರ್‌ಆನ್ ಪಠಿಸಬೇಕು. ನಾವು ಅರಬಿಗಳ ಹಾಗೆ ಶಬ್ದಗಳನ್ನು ಉಚ್ಚರಿಸುವುದು ಕಷ್ಟಸಾಧ್ಯವಾಗಿದೆ. ಅರಬಿಯೇತರರಿಗೆ ಕೆಲವು ಅಕ್ಷರಗಳನ್ನು ಸರಿಯಾಗಿ ಉಚ್ಚರಿಸಲಾಗುವುದಿಲ್ಲ. ಅರಬಿಗಳ ಜೊತೆ ಸೇರಿ ಕಲಿತವರಿಗೆ ಹೊರತು ಇದು ಸಾಧ್ಯವಾಗದು. ಮುಖ್ಯ ವಿಷಯ ಅಲ್ಲಾಹನ ವಚನಗಳ ಬಗ್ಗೆ ಪ್ರೀತಿ ಹೊಂದುವುದಾಗಿದೆ. ಸಾಧ್ಯವಿರುವಷ್ಟು ಮಟ್ಟಿಗೆ ಉಚ್ಚಾರ ಶುದ್ಧಿಯನ್ನು ಕೈಗೊಳ್ಳಬೇಕು. ಅದಕ್ಕೋಸ್ಕರ ಪ್ರಯತ್ನಿಸಬೇಕು. ಖಾರಿಗಳ ಹಾಗೆ ತೋರಿಕೆಯ ಉಚ್ಚಾರದ ಅಗತ್ಯವಿಲ್ಲ. ತೋರಿಕೆಗೋಸ್ಕರ ಖುರ್‌ಆನ್ ಪಾರಾಯಣ ಸ್ಪರ್ಧೆಯಲ್ಲಿ ಭಾಗವಹಿಸಿದರೆ ಸಾಕಾಗಲಾರದು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು **ಅಶ್‌ಹದು** ಎಂದು ಹೇಳುವುದಕ್ಕೆ ಬದಲಾಗಿ **ಅಸ್‌ಹದು** ಎಂದು ಉಚ್ಚರಿಸಿ ಅಝಾನ್ ನೀಡಿದಾಗ ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಪ್ರೀತಿಯಿಂದ ಅದನ್ನು ವೀಕ್ಷಿಸಿದರು. ಆ ಉಚ್ಚಾರಣೆಯನ್ನು ಯಾವುದೇ ಖಾರೀ ಅಥವಾ ಅರಬಿ ಎದುರಿಸಲು ಸಾಧ್ಯವಿಲ್ಲ.

ಮುಸ್ಲಿಮರಲ್ಲಿ ಬಹುತೇಕ ಜನರು ಪವಿತ್ರ ಖುರ್‌ಆನ್ ಓದಲು ತಿಳಿದವರಲ್ಲ. ಆಫ್ರಿಕಾದಲ್ಲಿ ಅನೇಕ ಸಂದರ್ಭಗಳಲ್ಲಿ ನಮ್ಮ ಮುಬಲ್ಲಿಗರು ಪವಿತ್ರ ಖುರ್‌ಆನ್ ಕಲಿಸುವ ಪಾಠಾವಳಿಯನ್ನು ಪ್ರಾರಂಭದಿಂದಲೇ ಓದಿಸಬೇಕಾಗುತ್ತದೆ. ಪವಿತ್ರ ಖುರ್‌ಆನ್ ಓದಲು ಕಲಿಸುವ ಅಧ್ಯಾಪಕರು ಪವಿತ್ರ ಖುರ್‌ಆನ್ ಓದುವವರಲ್ಲಿ ಅದರ ಬಗ್ಗೆ ಪ್ರೀತಿ ಮತ್ತು ಓದುವ ಉತ್ಸಾಹ ತಲೆದೋರುವಂತೆ ಕಲಿಸಬೇಕು. ನಾನು ಪ್ರಸ್ತಾಪಿಸಿದ ಜಾಪಾನಿ ಮಹಿಳೆಗೆ ಪವಿತ್ರ ಖುರ್‌ಆನ್ ಓದಲು ಕಲಿಸಿ ಅದರ ಬಗ್ಗೆ ಪ್ರೀತಿ ಹುಟ್ಟುವಂತೆ ಮಾಡಿದ ಮಹಿಳೆಗೆ ಅಲ್ಲಾಹನು ಉತ್ತಮ ಪ್ರತಿಫಲ ನೀಡಲಿ.

ಖಾರಿ ಓದುವ ಹಾಗೆ ಓದಲು ಕಲಿಯುವುದು ಮುಖ್ಯವಲ್ಲ. “ಆ ರೀತಿ ಶಬ್ದಗಳನ್ನು ಉಚ್ಚರಿಸಲು ನನಗೆ ಸಾಧ್ಯವಾಗುವುದಿಲ್ಲ” ಎಂದು ಯೋಚಿಸಿ ಪವಿತ್ರ ಖುರ್‌ಆನ್ ಓದುವುದನ್ನೇ ಬಿಟ್ಟು ಬಿಡಬಾರದು. ಪವಿತ್ರ ಖುರ್‌ಆನ್ ಪಾರಾಯಣ ಮಾಡುವುದು ಆವಶ್ಯಕವಾಗಿದೆ. ಅದನ್ನು ಉತ್ತಮ ರೀತಿಯಲ್ಲಿ ಪಠಿಸಲು ಪ್ರಯತ್ನಿಸಬೇಕು. ಕೆಲವು ಪದಗಳನ್ನು ಉಚ್ಚರಿಸಲು ಸಾಧ್ಯವಾಗುವುದಿಲ್ಲ ಕಷ್ಟವಾಗುತ್ತದೆ ಎಂದು ಹೇಳಿ ಪವಿತ್ರ ಖುರ್‌ಆನ್ ಓದುವುದನ್ನೇ ಬಿಟ್ಟುಬಿಡಬಾರದು. ಪ್ರತಿದಿನ ಪವಿತ್ರ ಖುರ್‌ಆನ್ ತಿಲಾವತ್ ಮಾಡುವ ಬಗ್ಗೆ ಪ್ರತಿಯೊಬ್ಬ ಅಹ್ಮದಿ ಗಮನಿಸಬೇಕು. ಮೂಲ ಶಬ್ದಕ್ಕೆ ಸಾಧ್ಯವಿರುವಷ್ಟು ಸರಿಹೊಂದುವಂತೆ ಉಚ್ಚರಿಸಲು ಪ್ರಯತ್ನ ಮಾಡಬೇಕು. ಅದನ್ನು ಮತ್ತೂ ಉತ್ತಮಪಡಿಸಲು ಪ್ರಯತ್ನಿಸುತ್ತಿರಬೇಕು.

ಒಮ್ಮೆ ಒಬ್ಬ ಅರಬಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೇಟಿಯಾಗಲು ಬಂದರು. ಮಾತಿನ ಮಧ್ಯೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಎರಡು ಮೂರು ಸಲ ಝ್ವಾದ್ (ض) ಅಕ್ಷರವನ್ನು ಉಚ್ಚರಿಸಿದಾಗ ಆ ಅರಬಿ ಹೇಳಿದನು: ನಿಮಗೆ ಝ್ವಾದ್ (ض) ಅಕ್ಷರವನ್ನು ಸರಿಯಾಗಿ ಉಚ್ಚರಿಸಲಾಗುವುದಿಲ್ಲ. ನೀವು ಹೇಗೆ ಮಸೀಹ್ ಮೌಊದ್ ಆಗಲು ಸಾಧ್ಯ? ಎಂದು. ಅರಬಿ ಮಾಡಿದುದು ಒಂದು ವ್ಯರ್ಥ ಸಾಹಸವಾಗಿತ್ತು. ಅರಬಿಗಳೇ ಸ್ವತಃ ಹೇಳುತ್ತಾರೆ– ನಾವು ಝ್ವಾದ್ ಉಚ್ಚಾರಣೆ ಸರಿಯಾಗಿ ಮಾಡಬಲ್ಲೆವು, ಆದರೆ ಹಿಂದೂಸ್ಥಾನಿಗಳು ಅದನ್ನು ಉಚ್ಚರಿಸಲಾರರು ಎಂದು.

ಅರಬಿಗಳಾದ ಅಹ್ಮದಿಯರು ಈ ವಿಷಯ ಗಮನಿಸಬೇಕಾಗಿದೆ. ಬಹುತೇಕ ಜನರು ಇದನ್ನು ಮನವರಿಕೆ ಮಾಡಿದ್ದಾರೆ. ಆದರೆ ಕೆಲವರಲ್ಲಿ ಅಹಂಭಾವವಿರುತ್ತದೆ. ಇಸ್ಲಾಮ್ ಪ್ರತಿಯೊಂದು ಜನಾಂಗದ ಹೃದಯವನ್ನು ಗೆಲ್ಲಬೇಕಾಗಿದೆ. ಅವರಿಗೆ ಪವಿತ್ರ ಖುರ್‌ಆನ್ ಓದಲು ಕಲಿಸಬೇಕು ಮಾತ್ರವಲ್ಲ ಅವರಲ್ಲಿ ಅದರ ಬಗ್ಗೆ ಪ್ರೀತಿ ಹುಟ್ಟಿಸಬೇಕು. ಪ್ರತಿಯೊಬ್ಬರ ಓದುವ ವಿಧಾನ ಬೇರೆ ಬೇರೆ

ಆಗಿರುತ್ತದೆ. ಪವಿತ್ರ ಖುರ್‌ಆನನ್ನು ಪ್ರೀತಿಸಿ ಅತ್ಯುತ್ತಮ ರೀತಿಯಲ್ಲಿ ಓದಲು ಪ್ರಯತ್ನಿಸಬೇಕು. ಖಂಡಿತವಾಗಿಯೂ ಸರಿಯಾದ ಉಚ್ಚಾರಣೆಯ ಬಗ್ಗೆ ಗಮನಿಸಬೇಕು. ಹೊಸದಾಗಿ ಮುಸ್ಲಿಮರಾಗುವವರಿಗೆ ಸಹಾಯ ಮಾಡಲು ಯಾರಿಗೆ ಸಾಧ್ಯವಿದೆಯೋ ಅವರು ಸಹಾಯ ಮಾಡಬೇಕು. ಕಲಿಯುವಾಗ ಸರಿಯಾಗಿ ಓದಲು ಪ್ರಯತ್ನಿಸಬೇಕು. ಆದರೆ ಈ ವಿಷಯದಲ್ಲಿ ಪರಿಹಾಸ ಮಾಡುವುದಕ್ಕೆ ಅನುಮತಿ ಇರುವುದಿಲ್ಲ.

ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಸುಧಾರಣೆ ಮಾಡುವ ಬಗ್ಗೆ, ಸತ್ಯವಿಶ್ವಾಸದಲ್ಲಿ ವೃದ್ಧಿ ಮತ್ತು ಅಲ್ಲಾಹನ ಸಾಮೀಪ್ಯ ಗಳಿಸುವ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದ್ದಾರೆ: ನೀವು ತಖ್ವವನ್ನು ಮತ್ತು ಪರಿಶುದ್ಧಿಯನ್ನು ನಿಮ್ಮೊಳಗೆ ಉಂಟುಮಾಡಿದರೆ, ದುಆ ಮತ್ತು ಝಿಕ್ರೆ ಇಲಾಹಿಯ ಸ್ವಭಾವ ಹೊಂದಿದರೆ, ದುರೂದ್ ಮತ್ತು ತಹಜ್ಜುದ್ ಅನುಷ್ಠಿಸುವುದನ್ನು ರೂಢಿಗೊಳಿಸಿದರೆ, ನಿಶ್ಚಯವಾಗಿಯೂ ಅಲ್ಲಾಹನು ನಿಮಗೆ ಸತ್ಯ ಸ್ವಪ್ನಗಳ ಮತ್ತು ದಿವ್ಯದರ್ಶನಗಳ ಪಾಲು ದಯಪಾಲಿಸುವನು. ಅವನು ತನ್ನ ಸಂದೇಶವಾಣಿ ಅವತೀರ್ಣಗೊಳಿಸುವನು. ಜೀವಂತ ಪವಾಡವೆಂದರೆ ವಾಸ್ತವದಲ್ಲಿ ಇದೇ ಆಗಿದೆ. ನಿಸ್ಸಂಶಯವಾಗಿಯೂ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರ ಅದ್ಭುತ ಕೃತ್ಯಗಳು ದೊಡ್ಡದಾಗಿದ್ದುವು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಅದ್ಭುತ ಕೃತ್ಯಗಳು ಸಹ ದೊಡ್ಡವು ಆಗಿದ್ದುವು. ಹಝ್ರತ್ ಈಸಾ ಅಲೈಹಿಸ್ಸಲಾಮರ ಅದ್ಭುತ ಕೃತ್ಯಗಳೂ ದೊಡ್ಡವು ಆಗಿದ್ದುವು. ಆದರೆ ಮನುಷ್ಯನಿಗೆ ಸ್ವತಃ ತನ್ನಲ್ಲಿ ಕಾಣುವ ಅದ್ಭುತ ಕೃತ್ಯಗಳು ಅತ್ಯಂತ ದೊಡ್ಡದಾಗಿರುತ್ತವೆ. ಇಂದಿನ ಕಾಲದಲ್ಲಿ ಜನರು ಅದ್ಭುತ ಕೃತ್ಯಗಳ ಬಗ್ಗೆ ವಿಚಾರಿಸುತ್ತಾರೆ. ಆದರೆ ಅದ್ಭುತ ಕೃತ್ಯಗಳನ್ನು ಕಾಣಬೇಕಾದರೆ ಅಲ್ಲಾಹನ ಜೊತೆ ಸಂಬಂಧ ಸ್ಥಾಪಿಸುವುದು ಆವಶ್ಯಕವಾಗಿದೆ.

ಸತ್ಯ ವಿಶ್ವಾಸದಲ್ಲಿ ವೃದ್ಧಿ ಮತ್ತು ತನ್ನಲ್ಲಿಯೇ ದೃಷ್ಟಾಂತ ಕಾಣವ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬ್ ಶಹೀದ್ ರವರ ಉದಾಹರಣೆ ನೀಡುತ್ತಾ ಹೀಗೆ ಹೇಳಿದರು: "ಹಝ್ರತ್ ಸಾಹಿಬ್‌ಝಾದ ಅಬ್ದುಲ್ಲತೀಫ್ ಸಾಹಿಬ್ ಶಹೀದ್‌ರನ್ನು ನೋಡಿರಿ. ಅವರು ಅಹ್ಮದಿಯತ್ ಸ್ವೀಕರಿಸಿ ಖಾದಿಯಾನ್‌ನಲ್ಲಿ ಸ್ವಲ್ಪ ಕಾಲ ವಾಸಿಸಿ ಕಾಬೂಲಿಗೆ ಮರಳಿ ಹೋದರು. ಅಲ್ಲಿನ ಗವರ್ನರ್ ಅವರನ್ನು ಕರೆದು ಹೇಳಿದರು: **'ತೌಬ ಮಾಡಿರಿ'** ಎಂದು. ಆಗ ಅವರು ಹೇಳಿದರು– ನಾನು ತೌಬ ಹೇಗೆ ತಾನೆ ಮಾಡಲು ಸಾಧ್ಯ? ನಾನು ಖಾದಿಯಾನ್‌ನಿಂದ ಹಿಂದಿರುಗುವಾಗ ನನ್ನ ಕೈಗಳಿಗೆ ಕೈಕೋಳ ತೊಡಿಸಿರುವುದಾಗಿ ನಾನು ಸ್ವಪ್ನದಲ್ಲಿ ಕಂಡಿದ್ದೇನೆ. ಆ ಮೂಲಕ ಅಲ್ಲಾಹನು ನನಗೆ ತಿಳಿಸಿದ್ದನು ಈ ಮಾರ್ಗ ಅವಲಂಬಿಸಿದರೆ ನೀನು ಕೈಕೋಳ ತೊಡಿಸಲ್ಪಡುವೆ ಎಂದು. ಈ ಕೈಕೋಳಗಳನ್ನು ತೆಗೆದು ಹಾಕಲು ನಾನು ಹೇಗೆ ಪ್ರಯತ್ನ ಮಾಡಲಿ. ನನ್ನ ಪ್ರಭುವಿನ ಮಾತು ಈಡೇರಲು ಈ ಕೈಕೋಳಗಳು ನನ್ನ ಕೈಗಳಲ್ಲಿರಬೇಕಾಗಿದೆ ಎಂದು ಹೇಳಿದರು. ನೀವು ನೋಡಿರಿ, ಅವರಿಗೆ ದೃಢವಿಶ್ವಾಸ ಉಂಟಾದುದು ಅವರು ಕಂಡ ಸ್ವಪ್ನದ ಕಾರಣದಿಂದಾಗಿದೆ. ಒಬ್ಬನು ಬಹಳ ಕಡಿಮೆ ಕಲಿತವನಾದರೂ ಅವನೊಂದು ಸ್ವಪ್ನ ಕಂಡರೆ ಅವನು ಹೇಡಿಯಾಗಿ ಅದನ್ನು ಅಡಗಿಸದಿದ್ದರೆ ತನ್ನ ಸುಳ್ಳು ಸ್ವಪ್ನದ ಬಗ್ಗೆ ಸಹ ಹೆಚ್ಚು ನಂಬಿಕೆ ಹೊಂದುತ್ತಾನೆ."

ಮನುಷ್ಯನ ವಿಶ್ವಾಸ ದೃಢವಾಗಿದ್ದರೆ ಹಾಗೂ ಅವನು ದೇವನೊಂದಿಗೆ ಸಂಬಂಧ ಹೊಂದಿದ್ದರೆ, ಅವನು ಲೌಕಿಕ ಜನರ ಬಗ್ಗೆ ಹೆದರಲಾರನು. ಇದರ ಒಂದು ಉದಾಹರಣೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ನೀಡುತ್ತಾರೆ: "ಹಝ್ರತ್ ಸೂಫೀ ಅಹ್ಮದ್ ಜಾನ್ ಸಾಹೇಬ್ ಲುಧಿಯಾನವೀ ತಮ್ಮ ಕಾಲದ ಓರ್ವ ಪ್ರಮುಖ ಸಾತ್ವಿಕರಾಗಿದ್ದರು. ಒಮ್ಮೆ ಜಮ್ಮುವಿನ ಮಹಾರಾಜ ಅವರಿಗೆ ಹೇಳಿ ಕಳುಹಿಸಿದನು– ತಾವು ಜಮ್ಮುವಿಗೆ ಬಂದು ನನಗೋಸ್ಕರ ಪ್ರಾರ್ಥಿಸಿರಿ ಎಂದು. ಆದರೆ ಅವರು ಜಮ್ಮುವಿಗೆ ಹೋಗಲು ಒಪ್ಪಲಿಲ್ಲ. ಅವರು ಹೇಳಿದರು– ನಾನು ಪ್ರಾರ್ಥಿಸಬೇಕೆಂದು ನೀವು ಇಚ್ಛಿಸುವುದಾದರೆ ನೀವೇ ನನ್ನ ಬಳಿಗೆ ಬನ್ನಿರಿ. ನಾನೇಕೆ ಜಮ್ಮುವಿಗೆ ಬರಬೇಕು?"

ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿತವಾಗಿದ್ದರೆ ಎಷ್ಟು ದೊಡ್ಡ ಮನುಷ್ಯನನ್ನಾದರೂ ಅಂತಹ ವ್ಯಕ್ತಿ ಹೆದರುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಮೊದಲು ಜನರಿಗೆ ಎಷ್ಟು ನಂಬಿಕೆ ಇತ್ತು, ಆದರೆ ಅವರು ತಾನು ದೇವ ನಿಯುಕ್ತನೆಂದು ವಾದಿಸಿದಾಗ ಎಂತಹ ಸ್ಥಿತಿ ಸಂಭವಿಸಿತು ಎನ್ನುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: **"ಬರಾಹೀನೆ ಅಹ್ಮದಿಯಾ** ಗ್ರಂಥದ ಪ್ರಸಿದ್ಧಿಯ ಕಾರಣ ಲಕ್ಷಾಂತರ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಅಭಿಮಾನ ಹೊಂದಿದ್ದರು. ಆದರೆ ಅವರು ತನ್ನ ವಾದಗಳನ್ನು ಮಾಡಿದಾಗ ಬಹಳ ನಿಷ್ಠಾವಂತರಾದವರೂ ಸಹ ಅವರನ್ನು ದ್ವೇಷಿಸಿದರು. 'ನಾವು ಚಿನ್ನವೆಂದು ಭಾವಿಸಿದುದು ಹಿತ್ತಾಳೆಯಾಯಿತು' ಎಂದು ಅವರು ಹೇಳತೊಡಗಿದರು. ಲಕ್ಷಾಂತರ ಜನರು ಅವರ ಬಗ್ಗೆ ಕೆಟ್ಟ ಸಂಶಯ ಹೊಂದಿದರು. ಅವರು ಬೈಅತ್ ಬಗ್ಗೆ ಪ್ರಕಟಿಸಿದಾಗ ಕೇವಲ ನಲ್ವತ್ತು ಜನರು ಮಾತ್ರ ಮೊದಲು ಬೈಅತ್ ಮಾಡಿದ್ದರು."

ಇಂದಿನ ಕಾಲದಲ್ಲಿ ಸಹ ಇಸ್ಲಾಮೀ ಟಿ.ವಿ. ಚ್ಯಾನಲ್‌ಗಳು ಹೀಗೆ ಹೇಳುತ್ತವೆ– ಆ ಕಾಲದಲ್ಲಿ ಅವರ ಸೇವೆಯ ಆವಶ್ಯಕತೆ ಇತ್ತು. ಆದರೆ ಅನಂತರ ಅವರು ಬಿಗಡಾಯಿಸಿದರು ಎಂದು (ನಊಝುಬಿಲ್ಲಾಹ್). ವಾಸ್ತವದಲ್ಲಿ ಈ ಜನರೇ ಹೃದಯದ ಅಂಧರಾಗಿರುವವರಾಗಿದ್ದಾರೆ. ಅಲ್ಲಾಹನು ಚಿನ್ನವನ್ನಾಗಿ ಮಾಡಿದುದನ್ನು ಈ ಜನರು ಹಿತ್ತಾಳೆ ಎಂದು ಭಾವಿಸುತ್ತಾರೆ. ಅಲ್ಲಾಹನು ತನ್ನ ಕೃತ್ಯಗಳ ಮೂಲಕ ಈ ಜಮಾಅತ್ ಬಗ್ಗೆ ನೀಡಿದ ಸಾಕ್ಷ್ಯಗಳ ಕಡೆಗೆ ನೋಡದೆ, ಅವರು ತಮ್ಮ ಆತ್ಮಗಳ ಅಂಧಕಾರದಲ್ಲಿ ಮುಳುಗಿರುವರು. ಕಡಿಮೆ ಜ್ಞಾನ ಹೊಂದಿದ ಮುಸ್ಲಿಮರನ್ನು ಈ ಜನರು ದಾರಿ ತಪ್ಪಿಸುತ್ತಿದ್ದಾರೆ. ಅಲ್ಲಾಹನು ಅವರಿಗೆ ಸದ್ಬುದ್ಧಿ ನೀಡಲಿ.

ಲುಧಿಯಾನದ **'ದಾರುಲ್ ಬೈಅತ್'** ಬಗ್ಗೆ ಪ್ರಸ್ತಾಪಿಸುತ್ತಾ 1931ರ ಮಜ್ಲಿಸೆ ಶೂರಾದಲ್ಲಿ ಹಝ್ರತ್ ಮುಸ್ಲಿಹ್

ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು: “ನನ್ನ ಅಭಿಪ್ರಾಯದಲ್ಲಿ ಲುಧಿಯಾನದ ದಾರುಲ್ ಬೈಅತ್‌ನ ವಿಷಯ ಬಹಳ ಮುಖ್ಯವಾಗಿದೆ. ಲುಧಿಯಾನ ಹದೀಸಿನಲ್ಲಿ ವಿವರಿಸಲಾದ **ಬಾಬುಲ್ಲುದ್ದ್** ಆಗಿದೆ. ಇಲ್ಲಿ ದಜ್ಜಾಲ್ ಕೊಲ್ಲಲ್ಪಡುವನೆಂದು ಭವಿಷ್ಯವಾಣಿ ಇದೆ. ಇಲ್ಲಿ ಶತ್ರುಗಳಿಗೆ ನಾಶ ಸಂಭವಿಸಿತು. ಇಲ್ಲಿ ದಜ್ಜಾಲನಿಗೆ ನಾಶ ಸಂಭವಿಸಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಖಾದಿಯಾನ್‌ನಿಂದ ಹೊರಟು ಬೈಅತ್ ಪಡಕೊಳ್ಳಲು ತಲಪಿದ ಆ ಸ್ಥಳದ ಬಗ್ಗೆ ಜಮಾಅತ್ ವಿಶೇಷ ಲಕ್ಷ್ಯ ನೀಡಬೇಕು.”

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ತನ್ನ ಬೈಅತ್ ಸ್ವೀಕರಿಸಬೇಕೆಂದು ಖಾದಿಯಾನ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಪೇಕ್ಷಿಸಿದಾಗ ಇಲ್ಲಿ ಬೈಅತ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದರು. ಅನಂತರ ಲುಧಿಯಾನದಲ್ಲಿ ಬೈಅತ್ ಪ್ರತಿಜ್ಞೆ ಪಡೆಯಲಾಯಿತು. ಅಲ್ಲಿನ ಹಿರಿಯರಾದ ಪೀರ್ ಅಹ್ಮದ್ ಜಾನ್ ಸಾಹೇಬ್ ಎಂಬವರು ಅದಕ್ಕಿಂತ ಮೊದಲೇ ಮೃತರಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾದಗಳನ್ನು ಪ್ರಕಟಿಸುವ ಮೊದಲೇ ಅವರನ್ನು ನಂಬಿದವರಲ್ಲಿ ಒಬ್ಬರಾಗಿದ್ದರು. ಅವರು ಮರಣಾಸನ್ನರಾಗಿದ್ದಾಗ ತನ್ನ ಕುಟುಂಬದವರನ್ನೆಲ್ಲಾ ಕರೆದು ಹೇಳಿದರು– ಹಝ್ರತ್ ಮಿರ್ಝಾ ಸಾಹೇಬರು ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿದರೆ ನೀವು ಎಲ್ಲರೂ ನಂಬಬೇಕು ಎಂದು ಹೇಳಿದ್ದರು. ಆ ಉಪದೇಶ ಪ್ರಕಾರ ಆ ಕುಟುಂಬದ ಎಲ್ಲರೂ ನಂಬಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ– ‘ಈ ಕಟ್ಟಡದ ನಕಾಶೆ ತಯಾರಿಸಿ ಅದರಲ್ಲಿ ಬೈಅತ್ ಮಾಡಿದ ಸ್ಥಳವನ್ನು ಗುರುತಿಸಬೇಕು ಎಂದು ನಾನು ಬಯಸುತ್ತೇನೆ. ಆ ದಿನದಂದು ಅಲ್ಲಿ ಒಂದು ಸಭೆ ಜರಗಿಸಬೇಕು. ಮೊದಲು ಬೈಅತ್ ಮಾಡಿದ ನಲ್ವತ್ತು ಜನರ ಹೆಸರು ಅಲ್ಲಿ ಬರೆದಿಡಬೇಕು’ ಎಂದು ಹೇಳಿದ್ದರು. ಅಲ್ಲಾಹನ ಅನುಗ್ರಹದಿಂದ ಲುಧಿಯಾನದ ಈ ಕಟ್ಟಡ ನಮ್ಮ ಜಮಾಅತಿನ ವಶದಲ್ಲಿದೆ. ಅಲ್ಲಿ ಜಮಾಅತ್ ಏನೆಲ್ಲ ಮಾಡಿದೆ ಎನ್ನುವುದರ ಬಗ್ಗೆ ಈಗ ನನ್ನ ಬಳಿ ಮಾಹಿತಿ ಇಲ್ಲ. ಅದನ್ನು ಸ್ಮಾರಕವಾಗಿರಿಸುವ ಕೆಲಸ ಮಾಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಬ್ಬ ಶಿಷ್ಯ ಅವರೊಂದಿಗೆ ಹೊಂದಿದ ಪ್ರೀತಿ ಬಾಂಧವ್ಯಗಳ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: “ಮಿಯಾಂ ಅಬ್ದುಲ್ಲ ಸಾಹೇಬ್ ಸನ್‌ವರಿ ರಝಿಯಲ್ಲಾಹು ಅನ್‌ಹು ಸರಕಾರಿ ಉದ್ಯೋಗಿಯಾಗಿದ್ದರು. ಒಮ್ಮೆ ಅವರು ರಜೆ ಪಡೆದು ಖಾದಿಯಾನಿಗೆ ಬಂದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯಾವುದೋ ಕೆಲಸ ಅವರಿಗೆ ವಹಿಸಿಕೊಟ್ಟರು. ಅಷ್ಟರಲ್ಲಿ ಅವರ ರಜೆ ಮುಗಿಯಿತು. ಅವರು ಖಾದಿಯಾನಿನಿಂದ ಹೋಗಲು ಅನುಮತಿ ಕೇಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇನ್ನೂ ಸ್ವಲ್ಪ ಕಾಲ ಇಲ್ಲಿ ನಿಲ್ಲಿರಿ. ಅವರು ರಜೆ ಮುಂದುವರಿಸಲು ಅಪೇಕ್ಷೆ ಕಳುಹಿಸಿದರು. ಆದರೆ ಅವರಿಗೆ ಇನ್ನು ರಜೆ ದೊರಕದು ಎಂದು ಉತ್ತರ ಲಭಿಸಿತು. ಅವರು ಈ ವಿಷಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೇಳಿದಾಗ ಅವರು ಹೇಳಿದರು: ಇನ್ನು ಸ್ವಲ್ಪ ಕಾಲ ಇಲ್ಲಿ ನಿಲ್ಲಿರಿ ಎಂದು. ಆಗ ಸನ್‌ವರಿ ಸಾಹೇಬರು ತನ್ನ ಕಚೇರಿಗೆ ‘ನನಗೆ ಈಗ ಬರಲು ಸಾಧ್ಯವಿಲ್ಲ’ ಎಂದು ಬರೆದರು. ಆಗ ಅವರನ್ನು ಕೆಲಸದಿಂದ ವಜಾಗೊಳಿಸಲಾಯಿತು. ಆ ಬಗ್ಗೆ ಆದೇಶ ಅವರಿಗೆ ಲಭಿಸಿತು. ಐದಾರು ತಿಂಗಳ ನಂತರ ಸನ್‌ವರಿ ಸಾಹೇಬರು ಮರಳಿ ತನ್ನ ಕಚೇರಿಗೆ ಹೋದಾಗ ಇಲಾಖೆಯಲ್ಲಿ ಅವರ ಬಗ್ಗೆ ಚರ್ಚೆ ನಡೆಯಿತು. ಕೊನೆಗೆ, ಅವರನ್ನು ಕೆಲಸದಿಂದ ವಜಾಗೊಳಿಸಿದ ಅಧಿಕಾರಿಗೆ ಆ ರೀತಿ ಕೆಲಸದಿಂದ ವಜಾಗೊಳಿಸುವ ಅಧಿಕಾರವೇ ಇಲ್ಲವೆಂದು ಸಾಬೀತಾಯಿತು. ಹಾಗೆ ಅವರಿಗೆ ಅವರ ಕೆಲಸ ಪುನಃ ದೊರಕಿತು ಮಾತ್ರವಲ್ಲ ಅವರು ಖಾದಿಯಾನಿನಲ್ಲಿ ವಾಸಿಸಿದ ಕಾಲದ ಸಂಬಳ ಸಹ ಲಭಿಸಿತು.

ಇದೇ ರೀತಿಯ ಒಂದು ಘಟನೆ ಮುನ್‌ಶೀ ಝಫರ್ ಅಹ್ಮದ್ ಸಾಹಿಬ್ ಕಪುರ್ತಲವಿಯವರಿಗೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: “ನಾನು ಮುನ್‌ಶೀ ಸಾಹೇಬರ ಸ್ವಂತ ಮಾತಿನಲ್ಲಿಯೇ ಈ ಘಟನೆಯ ವಿವರವನ್ನು ನಿಮ್ಮ ಮುಂದಿಡುತ್ತೇನೆ. ಅವರು ಹೇಳುತ್ತಾರೆ– ನಾನು ಶಿರಸ್ತೇದಾರನಾಗಿದ್ದಾಗ ಒಮ್ಮೆ ಫೈಲುಗಳನ್ನೆಲ್ಲಾ ತೆಗೆದಿರಿಸಿ ಖಾದಿಯಾನಿಗೆ ಬಂದೆನು. ನಾನು ಮೂರನೆಯ ದಿನ ಖಾದಿಯಾನಿನಿಂದ ಹೋಗಲು ಅನುಮತಿ ಕೇಳಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇನ್ನು ಸ್ವಲ್ಪ ಕಾಲ ಇಲ್ಲೇ ಇರಿ ಎಂದು. ನಾನು ಅಲ್ಲಿ ಒಂದು ತಿಂಗಳ ಕಾಲ ಇದ್ದೆ. ನನಗೆ ಕಚೇರಿಯಿಂದ ಪತ್ರಗಳು ಬರುತ್ತಾ ಇದ್ದರೂ ನಾನು ಹಝ್ರತ್ ಸಾಹೇಬರ ಜೊತೆಯಲ್ಲಿರುವಾಗ ಎಂತಹ ರಸಾನುಭೂತಿ ಹೊಂದುತ್ತಿದ್ದೆನೆಂದರೆ ನಾನು ನನ್ನ ಕೆಲಸದ ಚಿಂತೆಯನ್ನೇ ಬಿಟ್ಟು ಬಿಟ್ಟಿದ್ದೆ. ಕೊನೆಗೆ ಒಂದು ಕಠಿಣ ಪತ್ರ ಕಚೇರಿಯಿಂದ ನನಗೆ ಬಂತು. ಅದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮುಂದೆ ಇರಿಸಿದೆ. ಅವರು ಅದನ್ನು ಓದಿ ಹೇಳಿದರು– ಈಗ ನಾನು ಬರಲಾರೆ ಎಂದು ಬರೆಯಿರಿ ಎಂದು ಹೇಳಿದರು. ನಾನು ಹಾಗೆಯೇ ಬರೆದು ಕಳುಹಿಸಿದೆ. ಅನಂತರ ಒಂದು ತಿಂಗಳು ಕಳೆದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮರಳಿ ಹೋಗಲು ಅನುಮತಿ ನೀಡಿದರು. ಹಾಗೆ ನಾನು ಕಪುರ್ತಲ ತಲಪಿ ಮ್ಯಾಜಿಸ್ಟ್ರೇಟ್ ಲಾಲಾ ಹರ್‌ಚಂದ್ ದಾಸ್ ರವರ ಮನೆಗೆ ಹೋದೆ. ನಾನು ಅವರ ನ್ಯಾಯಾಲಯದಲ್ಲಿ ಕೆಲಸದಲ್ಲಿದ್ದೆ. ನನ್ನ ನೌಕರಿ ಬಗ್ಗೆ ಏನು ತೀರ್ಮಾನ ಆಗಿದೆ. ನನ್ನನ್ನು ಕೆಲಸದಿಂದ ತೆಗೆದುಹಾಕಲಾಗಿದೆಯೋ ದಂಡ ವಿಧಿಸಲಾಗಿದೆಯೋ ಎಂದು ತಿಳಿಯಲು ನಾನು ಬಯಸಿದ್ದೆ. ಮೆಜಿಸ್ಟ್ರೇಟ್ ಹೇಳಿದರು: ಮುನ್‌ಶೀಜಿ ತಮಗೆ ಮಿರ್ಝಾ ಸಾಹೇಬರು ಬರಲು ಅನುಮತಿ ನೀಡಿರಲಿಲ್ಲ ಎಂದು ತೋರುತ್ತದೆ. ನಾನು ಹೇಳಿದೆ ಹೌದು, ಅವರು ಅನುಮತಿ ನೀಡಲಿಲ್ಲ. ಆಗ ಮೆಜಿಸ್ಟ್ರೇಟ್ ಹೇಳಿದರು: ಅವರ ಆಜ್ಞೆಗೆ ಆದ್ಯತೆ ನೀಡಬೇಕಾಗಿದೆ!”

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮರ ಶಿಷ್ಯರು ಪ್ರೀತಿಯ ಎಂತಹ ಉನ್ನತ ಉದಾಹರಣೆ ತೋರಿಸಿದರೆಂದರೆ ನಮ್ಮ ಕಣ್ಣುಗಳು ಹಿಂದಿನ ಪ್ರವಾದಿಗಳ ಶಿಷ್ಯರ ಮುಂದೆ ತಗ್ಗಿಸಲ್ಪಡಲಾರದು. ನಮ್ಮ ಜಮಾಅತಿನ ಜನರಲ್ಲಿ ಎಷ್ಟು ಬಲಹೀನತೆಗಳಿದ್ದರೂ ಎಷ್ಟು ನಿರ್ಲಕ್ಷ್ಯತೆಗಳಿದ್ದರೂ ಹಝ್ರತ್ ಮೂಸಾ ಪ್ರವಾದಿಯ ಶಿಷ್ಯರ ಉದಾಹರಣೆ ನಮ್ಮ ಮುಂದೆ ಇರಿಸುವಾಗ ನಾವು ಅವರ ಮುಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯಗಣದ ಉದಾಹರಣೆ ಅವರ ಮುಂದೆ ಇರಿಸ ಬಲ್ಲೆವು. ಇದೇ ರೀತಿ ಖಿಯಾಮತ್ ದಿನ ಹಝ್ರತ್ ಈಸಾ ಅಲೈಹಿಸ್ಸಲಾಮರ ಶಿಷ್ಯರು ತಮ್ಮ ಉನ್ನತ ಮಟ್ಟದ ಕೆಲಸಗಳನ್ನು ಮುಂದುವರಿಸುವಾಗ ನಾವು ಅಭಿಮಾನದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರ ಉದಾಹರಣೆಗಳನ್ನು ಅವರ ಮುಂದಿರಿಸುವೆವು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು 'ನನ್ನ ಶಿಷ್ಯರ ಮತ್ತು ಮಹ್‌ದಿಯ ಶಿಷ್ಯರ ಮಧ್ಯೆ ಇರುವ ವ್ಯತ್ಯಾಸವೇನೆಂದು ತಿಳಿಯದು' ಎಂದು ಹೇಳಿದುದು ಇಂತಹ ಜನರ ಕಾರಣದಿಂದಾಗಿದೆ. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಇತರ ಸಹಾಬರ ಹಾಗೆ ಈ ಜನರು ಪ್ರತಿಯೊಂದು ರೀತಿಯ ಬಲಿದಾನ ಮಾಡುವವರಾಗಿದ್ದರು. ಅಲ್ಲಾಹನ ಮಾರ್ಗದಲ್ಲಿ ಪ್ರತಿಯೊಂದು ರೀತಿಯ ಕಷ್ಟ ಸಹಿಸಲು ಸಿದ್ಧರಾಗಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರನ್ನು ನೋಡಿರಿ. ಅವರಿಗೆ ಜಮಾಅತಿನಲ್ಲಿ ಒಂದು ಉನ್ನತ ಸ್ಥಾನವನ್ನು ಅಲ್ಲಾಹನು ನೀಡಿದುದರಿಂದ ಅವರ ಬಗ್ಗೆ ನಾನು ಪ್ರಸ್ತಾಪಿಸಿರಲಿಲ್ಲ. ಅವರು ನೀಡಿದ ಬಲಿದಾನಗಳು ಸಹ ಆಶ್ಚರ್ಯಕರವಾಗಿವೆ. ಅವರು ಖಾದಿಯಾನಿಗೆ ಬಂದ ಕಾಲದಲ್ಲಿ ಭೇರದಲ್ಲಿ ಅವರ ಚಿಕಿತ್ಸಾಲಯವಿತ್ತು. ಅವರ ಕೆಲಸ ಬಹಳ ವಿಶಾಲವಾಗಿ ನಡೆಯುತ್ತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದ ತನಗೆ ಭೇರಕ್ಕೆ ಮರಳಿ ಹೋಗಲು ಅನುಮತಿ ನೀಡಬೇಕೆಂದು ಹೇಳಿದಾಗ "ನೀವು ಹೋಗುವುದೇಕೆ ಇಲ್ಲೇ ಇರಿ" ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಅಂತೆಯೇ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ತನ್ನ ಸಾಮಗ್ರಿಗಳನ್ನು ತರಲು ಸಹ ಸ್ವತಃ ಭೇರಕ್ಕೆ ಹೋಗಲಿಲ್ಲ. ಅವರು ಬೇರೆ ಜನರನ್ನು ಕಳುಹಿಸಿ ತನ್ನ ಸಾಮಗ್ರಿಗಳನ್ನು ತರಿಸಿದರು.

ಈ ರೀತಿಯ ಬಲಿದಾನಗಳನ್ನು ಮಾಡಿದ ಜಮಾಅತ್ ಅಲ್ಲಾಹನ ಸನ್ನಿಧಿಯಲ್ಲಿ ವಿಶಿಷ್ಟ ಸ್ಥಾನ ಪಡೆಯುತ್ತದೆ. ಇಂತಹ ಸ್ಥಾನ ಪಡೆಯಲು ಪ್ರತಿಯೊಬ್ಬ ವ್ಯಕ್ತಿ ಪರಿಶ್ರಮಿಸಬೇಕಾಗಿದೆ. ಕೇವಲ ತಾರ್ಕಿಕವಾದ ವಿಶ್ವಾಸ ಮನುಷ್ಯನಿಗೆ ಯಾವ ಪ್ರಯೋಜನವನ್ನೂ ನೀಡಲಾರದು. ಯಾವ ವಿಶ್ವಾಸದಲ್ಲಿ ಪ್ರೇಮದ ಆಧಿಕ್ಯವಿರುತ್ತದೆಯೋ ಅದೇ ವಿಶ್ವಾಸ ಪ್ರಯೋಜನಕರವಾಗುವುದು. ದಾರ್ಶನಿಕ ತನ್ನ ಪ್ರೀತಿಯ ಬಗ್ಗೆ ಎಷ್ಟು ವಾದಿಸಿದರೂ ಅದರಲ್ಲಿ ವಾಗ್ವಾದಕ್ಕಿಂತ ಹೆಚ್ಚಿನ ಮಹತ್ವವಿರುವುದಿಲ್ಲ. ಏಕೆಂದರೆ ಅಂತಹ ವ್ಯಕ್ತಿ ಸತ್ಯವನ್ನು ಹೃದಯದ ಕಣ್ಣಿನಿಂದ ಕಂಡಿರುವುದಿಲ್ಲ. ಅವನು ಬುದ್ಧಿಯ ಕಣ್ಣಿನಿಂದ ಮಾತ್ರ ಕಂಡಿರುತ್ತಾನೆ. ಆದರೆ ಯಾರು ಬುದ್ಧಿಯ ಕಣ್ಣಿನ ಮೂಲಕವಲ್ಲದೆ, ಹೃದಯದ ದೃಷ್ಟಿಯಿಂದ ಅಲ್ಲಾಹನಿಂದ ಬಂದ ಸತ್ಯವನ್ನು ಮತ್ತು ಅಲ್ಲಾಹನ ಚಿಹ್ನೆಗಳನ್ನು ಗುರುತಿಸುತ್ತಾನೋ ಅವನಿಗೆ ಯಾರೂ ಮೋಸ ಮಾಡಲಾರನು. ಇದಕ್ಕೆ ಕಾರಣವೇನೆಂದರೆ ದರ್ಶನದ ಕೈ ಮಸ್ತಿಷ್ಕದ ಕಡೆಗೆ ಎತ್ತಲ್ಪಡುತ್ತದೆ. ಆದರೆ ಪ್ರೇಮದ ಕೈ ಹೃದಯದ ಕಡೆಗೆ ಎತ್ತಲ್ಪಡುತ್ತದೆ. ನಾವು ನಮ್ಮ ಹೃದಯದ ಕಣ್ಣುಗಳಿಂದ ಈ ಕಾಲಘಟ್ಟದ ಇಮಾಮರನ್ನು ಗುರುತಿಸಲು ಮತ್ತು ಯಾವಾಗಲೂ ಅದರಲ್ಲಿ ಸ್ಥಿರವಾಗಿ ನಿಲ್ಲಲ್ಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ನಾವು ಯಾವಾಗಲೂ ಅಲ್ಲಾಹನ ಗುರುತುಗಳನ್ನು ಗುರುತಿಸುವವರಾಗಲಿ. ಶೈತಾನನು ಎಂದೂ ನಮಗೆ ಮೋಸ ಮಾಡುವವನಾಗದಿರಲಿ – ಆಮೀನ್.

(ಖುತ್‌ಬದ ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಚೌಧರಿ ನವಾಬ್ ದೀನ್ ಸಾಹೇಬರ ಪುತ್ರ ಮೌಲವಿ ಖುರ್‌ಶೀದ್ ಅಹ್ಮದ್ ಸಾಹೇಬ್ ಪ್ರಭಾಕರ್ ಅವರ ನಮಾಝೇ ಜನಾಝ ಅನುಷ್ಠಿಸುವ ಬಗ್ಗೆ ಪ್ರಕಟಿಸಿದರು. ಅವರ ಸೇವೆಗಳ ಬಗ್ಗೆ ವಿವರಿಸಿದರು. ಅವರಿಗೆ ಉನ್ನತ ಪದವಿ ಲಭಿಸಲು ಪ್ರಾರ್ಥಿಸಿದರು. ಅವರ ಮಕ್ಕಳು ಮತ್ತು ಸಂತಾನ ಪರಂಪರೆ ಖಿಲಾಫತ್ ಮತ್ತು ಜಮಾಅತ್‌ನೊಂದಿಗೆ ಯಾವಾಗಲೂ ಸಂಬಂಧ ಹೊಂದಿರುವ ಭಾಗ್ಯ ಲಭಿಸಲಿ ಎಂದು ಪ್ರಾರ್ಥಿಸಿದರು.)

--------------*****--------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 31-07-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon